ದೂರಶಿಕ್ಷಣ ನಿರ್ದೇಶನಾಲಯ

**ಕನ್ನಡ ವಿಶ್ವವಿದ್ಯಾಲಯ, ಹಂಪಿ**

ವಿದ್ಯಾರಣ್ಯ ೫೮೩ ೨೭೬, ಹೊಸಪೇಟೆ ತಾಲೂಕು, ಬಳ್ಳಾರಿ ಜಿಲ್ಲೆ,

ದೂರವಾಣಿ: ೦೮೩೯೪-೨೧೦೨೦೦, ಫ್ಯಾಕ್ಸ್: ೦೮೩೯೪-೨೪೧೩೩೫, ಮೊ. ೯೪೮೧೨೨೦೯೪೫

ಇ-ಮೇಲ್ : dde.kuh@gmail.com


---

**ಡಾ. ವಾಸುದೇವ ಬಡಿಗೇರ**
ನಿರ್ದೇಶಕರು

ಸಂಖ್ಯೆ:ಕವಿಹಂ:ದೂಶಿನಿ:ಪರೀಕ್ಷೆ:೨೦೧೮-೧೯ ದಿನಾಂಕ ೧೫.೧೦.೨೦೧೮

ಮಾನ್ಯರೇ

**ವಿಷಯ: ೨೦೧೭-೧೮ರ ಪರೀಕ್ಷೆ ಕುರಿತು ಮಾಹಿತಿ.**

*****

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ದಿನಾಂಕ ೨೯.೧೦.೨೦೧೮ ರಿಂದ ೦೩.೧೧.೨೦೧೮ರವರೆಗೆ ವಾರ್ಷಿಕ ಪರೀಕ್ಷೆ ವೇಳಾಪಟ್ಟಿಯನ್ನು ನಿಗದಿಪಡಿಸಿ ದಿನಾಂಕ ೦೧.೧೦.೨೦೧೮ರಂದು ವಿಶ್ವವಿದ್ಯಾಲಯದ ಅಂತರಜಾಲದಲ್ಲಿ ಅಳವಡಿಸಲಾಗಿತ್ತು. ಈ ಅವಧಿಯಲ್ಲಿ ಬಳ್ಳಾರಿ ಲೋಕಸಭಾ ಕ್ಷೇತ್ರದ ಉಪ ಚುನಾವಣೆಯನ್ನು ದಿನಾಂಕ ೦೩.೧೧.೨೦೧೮ ರಂದು ನಿಗದಿಪಡಿಸಿರುವ ಹಿನ್ನೆಲೆಯಲ್ಲಿ ನಿಗದಿಪಡಿಸಿದ ವಾರ್ಷಿಕ ಪರೀಕ್ಷೆಯನ್ನು ಆಡಳಿತಾತ್ಮಕ ಅನುಮೋದನೆಯೊಂದಿಗೆ ಮುಂದೂಡಲಾಗಿದೆ.

**ದಿನಾಂಕ ೧೩.೧೧.೨೦೧೮ ರಿಂದ ೧೭.೧೧.೨೦೧೮ರವರೆಗೆ ೨೦೧೭-೧೮ನೇ ಸಾಲಿನ ಪರೀಕ್ಷೆಗಳು ನಡೆಯುತ್ತವೆ.**

**ಸೂಚನೆ:**

೧. ದಿನಾಂಕ ೦೨.೧೧.೨೦೧೮ರಿಂದ ಪ್ರವೇಶ ಪತ್ರಗಳನ್ನು ನೀಡಲಾಗುವುದು. [ಅಭ್ಯರ್ಥಿಗಳು ಗುರುತಿನ ಚೀಟಿ (ಐ.ಡಿ. ಕಾರ್ಡ್)ಯನ್ನು ತರುವುದು ಕಡ್ಡಾಯ] ವಿದ್ಯಾರಣ್ಯ ಕೇಂದ್ರದ ವಿದ್ಯಾರ್ಥಿಗಳು ಪ್ರವೇಶ ಪತ್ರಗಳನ್ನು ದೂರಶಿಕ್ಷಣ ನಿರ್ದೇಶನಾಲಯದಲ್ಲಿ ಬಂದು ಪಡೆದುಕೊಳ್ಳುವುದು.

೨. ಪರೀಕ್ಷಾ ಕೇಂದ್ರ ಬದಲಾವಣೆ ಇಚ್ಚಿಸಿದ ವಿದ್ಯಾರ್ಥಿಗಳು ನಿಗದಿತ ಶುಲ್ಕ **ರೂ. ೧೫೦೦/-** ಪಾವತಿಸಿ ಪರೀಕ್ಷಾ ಕೇಂದ್ರ ಬದಲಾವಣೆ ಮಾಡಿಕೊಳ್ಳಲು ೨೨.೧೦.೨೦೧೮ ಕೊನೆಯ ದಿನವಾಗಿರುತ್ತದೆ.

೩. ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ ಹೆಚ್ಚಿನ ಮಾಹಿತಿಗೆ ದೂ. ೦೯೩೯೪-೨೧೦೨೦೦ಗೆ ಸಂಪರ್ಕಿಸುವುದು ಹಾಗೂ ಪರೀಕ್ಷಾ ಕೇಂದ್ರ ಹಾಗೂ ವೇಳಾಪಟ್ಟಿಗಾಗಿ www.kannadauniversity.org ವೆಬ್‌ಸೈಟ್‌ನ್ನು ನೋಡಬಹುದು.

೪. **ಎಂ.ಎ. ಪ್ರಥಮ ವರ್ಷದ** ಕನ್ನಡ, ಚರಿತ್ರೆ, ಸಮಾಜಶಾಸ್ತ್ರ, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ (ಎಂ.ಜೆ.ಎಂ.ಸಿ.), ಹಾಗೂ ಪತ್ರಿಕೋದ್ಯಮ ಅಧ್ಯಯನ ಡಿಪ್ಲೊಮ, ಕನ್ನಡ ಸಾಹಿತ್ಯ **ಡಿಪ್ಲೊಮ,** ಪರೀಕ್ಷೆಗಳು **ಬೆಳಗ್ಗೆ ೧೦.೩೦ ರಿಂದ ೧.೩೦ರವರೆಗೆ,**

**ಎಂ.ಎ. ಅಂತಿಮ ವರ್ಷದ** ಕನ್ನಡ, ಚರಿತ್ರೆ, ಸಮಾಜಶಾಸ್ತ್ರ, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ (ಎಂ.ಜೆ.ಎಂ.ಸಿ.), ಹಾಗೂ ಪುರಾತತ್ವ, ಸಂಸ್ಕೃತಿ ಮತ್ತು ಪ್ರವಾಸೋದ್ಯಮ, ನಾಟಕ ಕಲೆ, ಭಾಷಾಂತರ ಅಧ್ಯಯನ, ಶಾಸನಶಾಸ್ತ್ರ ಅಧ್ಯಯನ, ಮಾಹಿತಿ ಸಂವಹನ **ಡಿಪ್ಲೊಮ** ಪರೀಕ್ಷೆಗಳು **ಮಧ್ಯಾಹ್ನ ೨.೩೦ ರಿಂದ ೫.೩೦ರವರೆಗೆ ನಡೆಯುತ್ತವೆ.**

೫. ಕನ್ನಡ ವಿಶ್ವವಿದ್ಯಾಲಯದ ವಿದ್ಯಾರಣ್ಯ ಆವರಣದಲ್ಲಿ ನಡೆಯುವ ಪರೀಕ್ಷೆಗಳು ನುಡಿ ಕಟ್ಟಡ (ತ್ರಿಪದಿ ವೃತ್ತದ ಬಳಿ)ದಲ್ಲಿ ನಡೆಯುತ್ತವೆ.

೬. ವಿದ್ಯಾರ್ಥಿಗಳು ತಮ್ಮ ವಸತಿ ವ್ಯವಸ್ಥೆಯನ್ನು ತಾವೇ ಮಾಡಿಕೊಳ್ಳುವುದು.

೭. ಮೊಬೈಲ್ ಫೋನ್, ಪೇಜರ್, ಕ್ಯಾಲಿಕ್ಯುಲೇಟರ್ ಇತ್ಯಾದಿ ಎಲೆಕ್ಟ್ರಾನಿಕ್ ಉಪಕರಣಗಳನ್ನು ಪರೀಕ್ಷಾ ಕೊಠಡಿಯ ಒಳಗೆ ತರುವುದನ್ನು ಕಡ್ಡಾಯವಾಗಿ ನಿಷೇಧಿಸಲಾಗಿದೆ.

೮. ಪರೀಕ್ಷಾ ಅಭ್ಯರ್ಥಿಯು ಪರೀಕ್ಷಾ ಕೇಂದ್ರದಲ್ಲಿ ಗುರುತಿನ ಚೀಟಿ ಮತ್ತು ಪ್ರವೇಶ ಪತ್ರ ಹೊಂದಿರುವುದು ಕಡ್ಡಾಯ. ಪರೀಕ್ಷಾಧಿಕಾರಿಗಳು ವಿಚಾರಿಸಿದಾಗ ಪರಿಶೀಲನೆಗೆ ನೀಡುವುದು.

೯. ಲಿಖಿತ ಪರೀಕ್ಷೆ ಆರಂಭಗೊಂಡ ಒಂದು ಗಂಟೆಯವರೆಗೆ ವಿದ್ಯಾರ್ಥಿಯು ಉತ್ತರ ಪತ್ರಿಕೆಯನ್ನು ನೀಡಿ ಹೊರಗೆ ಹೋಗುವಂತಿಲ್ಲ.

೧೦. ವಿದ್ಯಾರ್ಥಿಗಳು ಪರೀಕ್ಷೆಯ ನಂತರ ಉತ್ತರ ಪತ್ರಿಕೆಗಳನ್ನು ಕೊಠಡಿ ಮೇಲ್ವಿಚಾರಕರಿಗೆ ಒಪ್ಪಿಸುವುದು. ಕಡ್ಡಾಯ. ತಮ್ಮ ಆಸನದಲ್ಲಿ ಬಿಡುವಂತಿಲ್ಲ.

೧೧. ಪರೀಕ್ಷೆ ಪ್ರಾರಂಭಕ್ಕಿಂತ ಅರ್ಧ ಗಂಟೆ ಮೊದಲು ಪರೀಕ್ಷಾ ಕೊಠಡಿಯಲ್ಲಿ ತಮಗೆ ನಿಗದಿಪಡಿಸಿದ ಆಸನದಲ್ಲಿ ಕುಳಿತುಕೊಳ್ಳುವುದು ಕಡ್ಡಾಯ.

ನಿರ್ದೇಶಕರು

ನಿರ್ದೇಶಕರು
ದೂರಶಿಕ್ಷಣ ನಿರ್ದೇಶನಾಲಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩ ೨೭೬

**ಇವರಿಗೆ,**

E:dde\Exam\2017-18/dirletv/38